Indian Journal of History and Archaeology

ISSN (E): 2582-225X
Vol-1 Issue 1, May-June 2019. 14--21



# ಕಣಿಯನ್ ಸಮುದಾಯದ ವಿವಾಹ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ

**ಲೋಕೇಶ್ ಎಸ್.**

**ಲೋಕೇಶ್ ಎಸ್**
ಸಂಶೋಧಕರು, ಮಾನವಶಾಸ್ತ್ರ ಅಧ್ಯಯನನ ವಿಭಾಗ,
ಮಾನಸಗಂಗೋತ್ರಿ ಮೈಸೂರು

**ಪೀಠಿಕೆ:**

ಭಾರತೀಯ ಸಮಾಜ ಬಹು ಪ್ರಾಚೀನ ಹಾಗೂ ಸಂಕೀರ್ಣವಾದುದು, ವೈವಿಧ್ಯಪೂರ್ಣ ಹಾಗೂ ಸಮೃದ್ಧ ಪರಂಪರೆಯನ್ನೊಂದಿರುವ ನಾಗರಿಕ ಸಮಾಜ. ಸಾಮಾಜಿಕ ಹಾಗೂ ಆರ್ಥಿಕ ವಿಕಾಸದ ಹಲವು ಸ್ತರಗಳಲ್ಲಿರುವ ಜನರು ಒಟ್ಟಿಗೆ ವಾಸಮಾಡುತ್ತಿದ್ದಾರೆ. ಹಳೆಯ ಮತ್ತು ಆಧುನಿಕ ಮಾದರಿಯ ಜೀವನಶೈಲಿ, ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಇಲ್ಲಿನ ಜನರ ನಂಬಿಕೆ, ನಡವಳಿಕೆ, ಆಚಾರ–ವಿಚಾರಗಳಲ್ಲಿ ವೈವಿಧ್ಯವಿದೆ. ಭಾರತೀಯ ಸಾಮಾಜಿಕ ಸಂರಚನೆಯ ಇನ್ನೊಂದು ಮಹತ್ವದ ಘಟಕವೆಂದರೆ ಕುಟುಂಬ ಮತ್ತು ವಿವಾಹ ಪದ್ಧತಿ. ಇವು ಸಾಮಾಜಿಕ ವ್ಯವಸ್ಥೆಯ ಕೇಂದ್ರಬಿಂದುಗಳು. ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಒತ್ತಾಸೆ ನೀಡಿರುವ ಎರಡು ಪ್ರಮುಖ ಸಾಮಾಜಿಕ ಸಂಸ್ಥೆಗಳು. ಪರಿವರ್ತನೆಯ ದಾಳಿಯನ್ನು ಎದುರಿಸಿಯೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡಿರುವ ಸದೃಢವಾಗಿರುವ ಸಂಸ್ಥೆಗಳು.

ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ತಮ್ಮ ಜೀವನದಲ್ಲಿ ಜನನದಿಂದ ಸಾವಿನವರೆಗೆ ಆಚರಿಸುವ ಆಚರಣೆಗಳನ್ನು ಜೀವನಚಕ್ರ ಆಚರಣೆಗಳು ಅಥವಾ ಜೀವನಾವರ್ತಕ ಆಚರಣೆಗಳು ಎಂದು ಕರೆಯಲಾಗುತ್ತದೆ. ಜೀವನಾವರ್ತಕ ಆಚರಣೆಗಳಲ್ಲಿ ವಿವಾಹ ಆಚರಣೆಯೂ ಕೂಡ ಪ್ರಮುಖವಾದುದಾಗಿದೆ. ಜೀವನಾವರ್ತಕ ಆಚರಣೆಗಳ ಅಧ್ಯಯನಗಳು ಸಂಸ್ಕೃತಿ–ಸಂಸ್ಕೃತಿ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಅರ್ಥೈಸಿಕೊಳ್ಳಲು ಬಹಳಷ್ಟು ಸಹಾಯಕವಾಗಿದೆ.

ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಕಣಿಯನ್ ಬುಡಕಟ್ಟು ಸಮುದಾಯದ ವಿವಾಹ ಪದ್ಧತಿಯನ್ನು ಸಾಂಸ್ಕೃತಿಕ ದೃಷ್ಟೀಕೋನದಲ್ಲಿ ವಿಶ್ಲೇಷಿಸಲಾಗಿದೆ. ಕಣಿಯನ್ ಸಮುದಾಯದವರು ಕರ್ನಾಟಕ ರಾಜ್ಯದ ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಉಡುಪಿ, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಪ್ರಸ್ತುತ ಅಧ್ಯಯನಕ್ಕೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕಣಿಯರನ್ನು ಕಣಿಯರು, ಕಣೆಯನ್, ಕನಿಯನ್, ಕಣ್ಯಾನ್, ಕಣಿಸನ್, ಕಣಿಯ, ಕನಿಯ, ಕಣಿ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಹೆಸರುಗಳು 'ಕಣಿ' ಎಂಬ ಶಬ್ದದಿಂದ ಬಂದಿದ್ದು, ಕಣಿ ಎಂಬ ಪದವು ಸಂಸ್ಕೃತ ಭಾಷೆಯ 'ಗನಿಕ' ಎಂಬ ಪದದ ರೂಪಾಂತರವಾಗಿದ್ದು, ಗನಿಕ ಎಂಬ ಪದವು ಜ್ಯೋತಿಷಿ ಎಂಬ ಅರ್ಥವನ್ನು ಕೊಡುತ್ತದೆ. ಅಂದರೆ ಕಣಿಯನ್ ಸಮುದಾಯದ ಮೂಲ ವೃತ್ತಿ 'ಶಾಸ್ತ್ರ' (ಭವಿಷ್ಯ) ಹೇಳುವುದಾಗಿದೆ ಎಂಬ ಅಂಶವನ್ನು ಮನಗಾಣಬಹುದಾಗಿದೆ

ಇವರು ತಮ್ಮ ಹಣೆಯಲ್ಲಿ ಮೂರು ನಾಮಗಳನ್ನು ಹಾಕಿಕೊಳ್ಳುತ್ತಾರೆ. ಮಧ್ಯದಲ್ಲಿ ಕೆಂಪುನಾಮ ಅಕ್ಕ ಪಕ್ಕದಲ್ಲಿ ಎರಡು ಬಿಳಿನಾಮಗಳನ್ನು ಹಾಕುತ್ತಾರೆ. ಜ್ಯೋತಿಷ್ಯ ಹೇಳುವುದು, ಕೊಡೆ ತಾಯಾರಿಕೆ ಮತ್ತು ವ್ಯವಸಾಯ ಮಾಡುವುದು ಇವರ ವೃತ್ತಿಯಾಗಿದೆ. ಹಾಗೂ ಗಿಡ ಮೂಲಿಕೆ ಔಷಧಿ ನೀಡುವ ಕಲೆಯನ್ನು ರೂಢಿಸಿಕೊಂಡಿದ್ದಾರೆ.

ಮಾನವ ಜೀವನದಲ್ಲಿ 'ವಿವಾಹ' ಒಂದು ಮಹತ್ವದ ಘಟ್ಟ. ಅಪರಿಚಿತವಾದ ಗಂಡು ಹೆಣ್ಣನ್ನು ಒಂದುಗೂಡಿಸಿ, ಜೀವನ ಸಂಗಾತಿಗಳನ್ನಾಗಿ ಮಾಡುವ ವಿಶಿಷ್ಟವಾದ ಸಂದರ್ಭ. ಮದುವೆ ಬದುಕಿಗೆ ಒಂದು ಭದ್ರತೆಯನ್ನು, ಜವಾಬ್ದಾರಿಯನ್ನು ತಂದುಕೊಟ್ಟು ಜೀವನಕ್ಕೆ ಉತ್ಸಾಹವನ್ನು, ಆನಂದವನ್ನು ತುಂಬುತ್ತದೆ. ಎರಡು ಕುಟುಂಬಗಳ ನಡುವೆ ಹೊಸ ಸಂಬಂಧವನ್ನು ಬೆಸೆಯುತ್ತದೆ. ಮದುವೆ ಸಂಪ್ರದಾಯದಲ್ಲಿ ಬೇರೆ ಬೇರೆ ಜಾತಿಯ ಜನರು ಅವರದೇ ಆದ ಕೆಲವು ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದಾರೆ. ಅದೇ ರೀತಿ ಕಣಿಯನ್ ಬುಡಕಟ್ಟು ಸಮುದಾಯದವರು ಕೂಡ ತಮ್ಮದೇ ರೀತಿಯ ಸಾಂಪ್ರದಾಯಿಕ ವಿವಾಹ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಈ ಪದ್ಧತಿ ಅನಾದಿ ಕಾಲದಿಂದಲೂ ನಡೆದು ಬಂದಿದೆ. ಇಂದಿಗೂ ಇವರು ಆ ವಿಧಿ-ವಿಧಾನ ಪದ್ಧತಿಗಳನ್ನು ಚಾಚು ತಪ್ಪದೇ ನಡೆಸಿಕೊಂಡು ಬರುತ್ತಿದದ್ದಾರೆ.

**ಕಣಿಯನ್ ಸಮುದಾಯದ ವಿವಾಹದಲ್ಲಿ ಕುಲಗಳ ಪಾತ್ರ:**

ವಿವಾಹದಲ್ಲಿ ಕುಲಗಳು ಮಹತ್ವದ ಪಾತ್ರವಹಿಸುತ್ತದೆ. ಒಂದೇ ಕುಲದವರಲ್ಲಿ ವಿವಾಹ ನಿಷಿದ್ಧ. ಏಕೆಂದರೆ ಒಂದೇ ಕುಲದ ಎಲ್ಲಾ ವ್ಯಕ್ತಿಗಳು ಒಂದೇ ಪಿತೃ ವಂಶಕ್ಕೆ ಸೇರಿದವರಾಗಿರುತ್ತಾರೆ. ಪ್ರತಿ ಕುಲದ ನಡುವೆ ಒಂದು ಅಂತರವಿರುತ್ತದೆ. ಒಂದೇ ಕುಲ ಬಿಟ್ಟು ಬೇರೆ ಯಾವುದೇ ಕುಲದಲ್ಲಾದರೂ ಮದುವೆಯಾಗಬಹುದು. ಏಕೆಂದರೆ ಇತರರಂತೆ ಇವರಲ್ಲಿಯೂ ಕೂಡ ಒಂದೇ ಕುಲದವರು ಸೋದರ ಸಂಬಂಧಿಗಳು ಎಂಬ ಭಾವನೆ ಇದೆ. ಸಾಮಾನ್ಯವಾಗಿ ಸೋದರ ಮಾವನ ಮಗ ಅಥವಾ ಸೋದರ ಮಾವನ ಮಗಳು ಮತ್ತು ಅಕ್ಕನ ಮಗಳ ನಡುವೆ ವಿವಾಹ ಏರ್ಪಡಿಸುತ್ತಾರೆ.

ವಂಶಪಾರಂಪರೆಯಲ್ಲಿ ಕೆಲವು ಕುಲಗಳು ಪಿತೃ ಪ್ರಧಾನ ಕುಟುಂಬಗಳಿದ್ದು, ಮಗ ಅಥವಾ ಮಗಳು ಕುಲವನ್ನು ತಂದೆಯಿಂದ ಪಡೆಯುತ್ತಾರೆ. ಆದರೆ ಹೆಣ್ಣು ಮಗಳು ಮದುವೆಯಾದ ತಕ್ಷಣ ತಮ್ಮತಂದೆಯಿಂದ ಪಡೆದ ಕುಲವನ್ನು ಬಿಟ್ಟು, ತನ್ನ ಗಂಡನ ಕುಲವನ್ನು ಅಳವಡಿಸಿಕೊಳ್ಳುತ್ತಾರೆ. ಹಾಗೆಯೇ ಕೆಲವು ಜಿಲ್ಲೆಗಳಲ್ಲಿ ಬದಲಾವಣೆ ಕಾಣಬಹುದುದಾಗಿದ್ದು ಅಂದರೆ ದಕ್ಷಿಣ ಕನ್ನಡ ಜಿಲ್ಲೆಯ ಕಣಿಯರು ಮಾತೃ ಪ್ರಧಾನ ವಂಶಾವಳಿಯನ್ನು ಅವಲಂಭಿಸಿದ್ದು, ಅಲ್ಲಿ ಮಗನು ತಮ್ಮ ತಾಯಿಯ ಕುಲವನ್ನು ಬಿಟ್ಟು ಆತನ ಹೆಂಡತಿಯ ಕುಲವನ್ನು ಅನುಸರಿಸಿಕೊಳ್ಳುತ್ತಾರೆ.

ಕಣಿಯರಲ್ಲಿ ಸಾಮಾನ್ಯವಾಗಿ ಹೆಣ್ಣಿಗೆ 18 ರಿಂದ 24 ವರ್ಷದೊಳಗೆ, ಗಂಡಿಗೆ 24 ರಿಂದ 28 ವರ್ಷದೊಳಗೆ ಮದುವೆ ಮಾಡುವುದು ಸಾಮಾನ್ಯ. ಹಿಂದೆ ಚಿಕ್ಕವಯಸ್ಸಿನಲ್ಲಿ ವಿವಾಹ ಏರ್ಪಡುತ್ತಿತ್ತು. ವಧು–ವರರ ಆಯ್ಕೆ ಮಾಡುವಾಗ ಹೆಣ್ಣು ಗಂಡಿನ ಜಾತಕ ಸರಿಹೊಂದಿದರೆ ಮಾತ್ರ ಮುಂದುವರೆಯುತ್ತಾರೆ. ಹುಡುಗ–ಹುಡುಗಿಯ ಆಯ್ಕೆಯ ಮುಖ್ಯ ಮಾನದಂಡ ಜಾತಿ, ಇವರ ನಡುವೆ ಅಂತರ್ಜಾತಿ ಮಧುವೆ ಅಪರೂಪ. ಇವರು ವಿವಾಹವನ್ನು ಮಹಾಸುದಿನವೆಂದು ಭಾವಿಸುತ್ತಾರೆ.

**ವಿವಾಹ ಸಿದ್ಧತೆಗಳು:**

ಕಣಿಯನ್ ಸಮುದಾಯದಲ್ಲಿ ತಮ್ಮ ಮಕ್ಕಳಿಗೆ ವಧು ಅಥವಾ ವರರನ್ನು ಆಯ್ಕೆ ಮಾಡುವ ಅಧಿಕಾರ ತಂದೆ–ತಾಯಿಗೆ ಇರುತ್ತದೆ. ಸಾಮಾನ್ಯವಾಗಿ ಪ್ರಾಪ್ತ ವಯಸ್ಸಿನ ಹುಡುಗಿಗೆ ತನ್ನ ಗಂಡನನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸ್ವತಂತ್ರ ಅವಕಾಶ ನೀಡುವುದಿಲ್ಲವಾದರೂ ಹೆಣ್ಣು ಮಕ್ಕಳ ಅಭಿಪ್ರಾಯಕ್ಕೆ ಇತ್ತೀಚಿನ ದಿನಗಳಲ್ಲಿ ಪಾಶಸ್ತ್ಯ ನೀಡುವುದನ್ನು ಕಾಣಬಹುದಾಗಿದೆ.

ಮಕ್ಕಳು ವಿವಾವಹದ ವಯಸ್ಸಿಗೆ ಬಂದಾಗ ಅವರ ತಂದೆ–ತಾಯಿಯಂದಿರು ಹಾಗೂ ಅಜ್ಜಿ ತಾತ ಹಿರಿಯರು ವರ–ವಧಿವನ್ನು ಹುಡುಕುವ ಕಾರ್ಯವನ್ನು ಮಾಡುತ್ತಾರೆ. ಸಾಮಾನ್ಯವಾಗಿ ಗಂಡಿನ ಮನೆಯವರು ಮೊದಲಿಗೆ ಹೆಣ್ಣಿನ ಮನೆಗೆ ಹೋಗುತ್ತಾರೆ. ಗಂಡಿನ ಮನೆಯವರ ಜೊತೆಯಲ್ಲಿ ಅವರ ಸಂಬಂಧಿಕರು ಇರುತ್ತಾರೆ. ಅಲ್ಲದೆ ಇತರ ಜನಾಂಗದವರು ಸ್ನೇಹಿತರಾಗಿದ್ದಲ್ಲಿ ಅವರು ಇರುತ್ತಾರೆ.

**ಗಣಕೂಟ ನೋಡುವ ಶಾಸ್ತ್ರ**

ಕಣಿಯರು ಮೊದಲಿಗೆ ಗಣಕೂಟವನ್ನು ನೋಡುತ್ತಾರೆ. ಈ ಗಣಕೂಟದಲ್ಲಿ ಹೆಣ್ಣು ಮತ್ತು ಗಂಡಿನ ಹೆಸರುಗಳ ಹೊಂದಾಣಿಕೆ ನಕ್ಷತ್ರಗಳ ಜೋಡಣೆ ಗಂಡಿನ ಹೆಸರು ಹೊಂದಿಕೆಯಾಗುತ್ತದೇಯೆ ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಗಣಕೂಟ ಸರಿಹೊಂದಿದರೆ ವಿವಾಹ ಏರ್ಪಡಿಸುತ್ತಾರೆ, ಇಲ್ಲವಾದರೆ ವಿವಾಹವನ್ನು ನಡೆಸುವುದಿಲ್ಲ. ಈ ಜಾತಕವನ್ನು ಕಣಿಯನ್ ಪುರೋಹಿತರ ನೆರವಿನಿಂದ ತಾಳೆ ನೋಡುತ್ತಾರೆ.

**ಮನೆ ನೊಡುವ ಶಾಸ್ತ್ರ:**

ಕಣಿಯರ ಸಮುದಾಯದವರಲ್ಲಿ ಗಂಡು ಮತ್ತು ಹೆಣ್ಣು ಆಯ್ಕೆಯಾದರೆ ಅವರ ತಂದೆ–ತಾಯಿಯಂದಿರು ಪರಸ್ಪರ ವಿಚಾರ ಮಾಡಿ ಒಂದು ನಿರ್ಣಯಕ್ಕೆ ಬಂದು, ನಂತರ ತಮ್ಮ ಜನಾಂಗದ ದೊಡ್ಡ ಯಜಮಾನರ ನೆರವು ಕೋರಿ ಅವರ ಮುಖಂಡತ್ವದಲ್ಲಿ ಮದುವೆಯನ್ನು ನಿಶ್ಚಿಯಿಸುತ್ತಾರೆ. ಎರಡು ಕುಟುಂಬಗಳ ಬಂಧು ಬಳಗದವರು ಹೆಣ್ಣಿನ ಮನೆಗೆ ಬರುವುದಕ್ಕೆ ಹೇಳುವರು. ಸಾಂಪ್ರದಾಯಿಕವಾಗಿ

ವಿವಾಹವಾಗಲು ಒಪ್ಪಿಗೆಯನ್ನು ಮಾಡಿಕೊಳ್ಳುತ್ತಾರೆ. ಅಂದು ಹೆಣ್ಣಿನ ಮನೆಯಲ್ಲಿ ಸಾಂಪ್ರಾದಾಯಿಕವಾಗಿ ಊಟೋಪಚಾರದ ವ್ಯವಸ್ಥೆ ಮಾಡುತ್ತಾರೆ. ಇದರಲ್ಲಿ ಹೆಣ್ಣಿನ ಬಂಧು ಬಳಗದವರು, ಮನೆಯವರು ಹಾಗು ಗಂಡಿನ ಕಡೆಯವರು ಸೇರುತ್ತಾರೆ. ಕಣಿಯನ್ ಯಜಮಾನನ ನೆರವಿನೊಂದಿಗೆ ಗಂಡು ಮತ್ತು ಹೆಣ್ಣಿನ ಜಾತಕದ ಆಧಾರದ ಮೇಲೆ ಮದುವೆಗೆ ಒಂದು ಶುಭ ದಿನವನ್ನು ಗೊತ್ತು ಮಾಡುತ್ತಾರೆ. ಹೀಗೆ ಗೊತ್ತು ಮಾಡಿದ ದಿನದಂದು ಕಣಿಯನ್‌ರ ದೊಡ್ಡ ಯಜಮಾನರ ಮುಂದಾಳತ್ವದಲ್ಲಿ ಸಾಂಪ್ರಾದಾಯಿಕವಾಗಿ ಮದುವೆಯನ್ನು ಮಾಡಿಸುತ್ತಾರೆ. ಗಂಡಿನ ಮನೆಯವರು ಹೆಣ್ಣಿನ ಬಟ್ಟೆ ಬರೆಗಳನ್ನು ತರಲು ಹಣವನ್ನು ಕೋಡುತ್ತಾರೆ. ಮುಖ್ಯವಾಗಿ ಇವರಲ್ಲಿ ವಿವಾಹದ ಎಲ್ಲಾ ಖರ್ಚು ಗಂಡಿನ ಕಡೆಯವರಿಂದ ನಡೆಯುತ್ತದೆ. ಹೆಣ್ಣಿನ ಮನೆಯವರು ಕೇಳಿದ ರೀತಿಯಲ್ಲಿ ಗಂಡಿನ ಮನೆಯವರು ಆಭರಣಕ್ಕೆ ಹಣವನ್ನುಕೊಡಬೇಕು. ಇದು ಅವರ ಆರ್ಥಿಕ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

**ಮನೆ ತುಂಬಿಸಿಕೊಳ್ಳುವುದು:**

ಹೆಣ್ಣಿನ ಮನೆಯವರು ತಮ್ಮ ಹೆಣ್ಣಿನ್ನು ಕರೆದುಕೊಂಡು ಗಂಡಿನ ಮನೆಗೆ ಬರುತ್ತಾರೆ. ಈ ಹೆಣ್ಣಿನ ಮನೆಯವರ ಜೊತೆಯಲ್ಲಿ ಅವರ ಎಲ್ಲಾ ಕುಲದ ಜನರು ಇರುತ್ತಾರೆ. ಗಂಡಿನ ಊರಿನ ಅಂಕಣದಲ್ಲಿ ಹೆಣ್ಣಿನವರು ತಮ್ಮ ಹೆಣ್ಣನ್ನು ಕರೆದುಕೊಂಡು ಗಂಡಿನ ಮನೆಗೆ ಬರುತ್ತಾರೆ. ಗಂಡಿನ ಕಡೆಯವರು ವಾಧ್ಯ ಸಮೇತವಾಗಿ ನಡು ಚಪ್ಪರವನ್ನು ತೆಗೆದುಕೊಂಡು ಹೆಣ್ಣು ಕುಳಿತಿರುವ ಸ್ಥಳಕ್ಕೆ ಬರುತ್ತಾರೆ. ಗಂಡಿನ ಕಡೆಯವರು ಬಂದ ತಕ್ಷಣ ಹೆಣ್ಣಿನ ಕಡೆಯವರು ತಾವು ತಂದಿದ್ದ ನಡುಚಪ್ಪರವನ್ನು ಹಿಡಿದು ನಂತರ ಆ ಗಂಡಿನ ಕಡೆಯವರು ತಂದಿದ್ದ ನಡುಚಪ್ಪರವನ್ನು ತಾಕಿಸುತ್ತಾರೆ. ನಂತರವೇ ಹೆಣ್ಣಿನ ಕಡೆಯವರು ಎಳ್ಳು ಜೀರಿಗೆಯನ್ನು ಗಂಡಿನ ಕಡೆಯವರ ಮೇಲೆ ಎರಚುತ್ತಾರೆ. ನಂತರ ಗಂಡಿನ ಕಡೆಯವರು ಸಹ ಎಳ್ಳು-ಜೀರಿಗೆಯನ್ನು ಹೆಣ್ಣಿನ ಕಡೆಯವರಿಗೆ ಎರಚುತ್ತಾರೆ. ಇದಾದ ನಂತರ ಹೆಣ್ಣನ್ನು ಮತ್ತು ಗಂಡಿನ ಕಡೆಯವರು ತಾವುಗಳು ತಂದಿದ್ದ ಬಿಂದಿಗೆ ನೀರನ್ನು ವಿನಿಮಯ ಮಾಡಿಕೊಂಡು ತಮ್ಮ ತಮ್ಮ ಕೈಕಾಲುಗಳನ್ನು ತೊಳೆದು ಕೊಳ್ಳುತ್ತಾರೆ. ನಂತರ ಹೆಣ್ಣನ್ನು ಗಂಡಿನ ಕಡೆಯವರ ನಡುಚಪ್ಪರಕ್ಕೆ ಕರೆದುಕೊಳ್ಳುತ್ತಾರೆ. ಹೆಣ್ಣು ಗಂಡಿನ ಮನೆಯ ಒಳಗಡೆ ಪ್ರವೇಶಿಸಿದ ತಕ್ಷಣ ಗಂಡು ತನ್ನ ಮನೆಯಿಂದ ಹೊರಬರುತ್ತಾನೆ.

**ದೇವರು ತರುವುದು:**

ಬೆಳ್ಳಗಿನ ಜಾವ 4 ಗಂಟೆ ಸಮಯಕ್ಕೆ ಸರಿಯಾಗಿ ವಾಧ್ಯ ಸಮೇತವಾಗಿ ಶಾಸ್ತ್ರ ನೀರನ್ನು ತರಲು ಕುಲಸ್ಥರು ಕೆರೆ ಅಥವಾ ತಾವು ಸೇದುವ ಬಾವಿಗೆ ಹೋಗುತ್ತಾರೆ ಈ ಕಾರ್ಯ ಎರಡು ಕಡೆಯ ಜನರು ಮಾಡುತ್ತಾರೆ. ಐದು ಬಿಂದಿಗೆ ನೀರನ್ನು ಹೆಣ್ಣು ಮಕ್ಕಳು ಚಪ್ಪರದ ಒಳಗಡೆ ತರುತ್ತಾರೆ. ಇದನ್ನು ಶಾಸ್ತ್ರದ ನೀರೆಂದು ಕರೆಯುತ್ತಾರೆ. ಇಲ್ಲಿ ಆ ದಿನ ಕುಲಸ್ಥರಿಗೆ ಊಟವಿರುತ್ತದೆ. ಊಟದ ಕಾರ್ಯವನ್ನು ಗಂಡಿನ ಕಡೆಯವರು ತಮ್ಮ ಖರ್ಚಿನಿಂದ ನಡೆಸುತ್ತಾರೆ ಇಲ್ಲಿ ಕುಲದ ಪ್ರಮುಖ ಯಜಮಾನರು ತನ್ನ ಕೆಳಗಡೆ ಇರುವ ಚಿಕ್ಕ ಯಜಮಾನನಿಗೆ ಮದುವೆಯ ವಿಷಯವಾಗಿ ತಿಳಿಸಿದ ಮೇಲೆ ಚಿಕ್ಕ ಯಜಮಾನರು ತಮ್ಮ ಕುಲದ ಎಲ್ಲರಿಗೂ ತಿಳಿಸುತ್ತಾರೆ.

**ಕನ್ಯಾದಾನ ಅಥವಾ ತೆರ ಕಟ್ಟುವುದು:**

ಕನ್ಯಾಶುಲ್ಕವನ್ನು ಬಹಳ ಹಿಂದೆ ವಧುವಿಗೆ ಕೊಡುವ ಪದ್ದತಿ ಕಣಿಯನ್‌ರಲ್ಲಿದೆ. ಇದನ್ನು "ತೆರೆ" ಅಂತಲೂ ಕರೆಯುತ್ತಾರೆ. ಬಹಳ ಹಿಂದೆ ನಾಲ್ಕಾಣಿ (25 ಪೈಸೆ) ಇತ್ತು. ಹಿಂದೆ ಸುಮಾರು 65 ರಿಂದ 75 ವರ್ಷಗಳ ನಂತರ 25 ರೂಗಳಾಗಿದೆ. ಮೊದಲಿಗೆ ಗಂಡಿನ ಮನೆಯವರು ತೆರ ಎಂಬ ಸಂಪ್ರದಾಯಿಕ ವಿಧಿಯನ್ನು ಅಚರಿಸುತ್ತಾರೆ. ಈ ತರಹದ ಪ್ರಕಾರ ಗಂಡಿನ ಮನೆಯವರು ಹೆಣ್ಣಿನ ಮನೆಯವರಿಗೆ 25ರೂ.ಗಳನ್ನು ಕೊಡುತ್ತಾರೆ. ಏಕೆಂದರೆ ಗಂಡಿನ ಕಡೆಯವರು ಹೆಣ್ಣನ್ನು ಕೊಂಡುಕೊಳ್ಳಬೇಕೆಂಬ ನಿಯಮ ಇವರಲ್ಲಿದೆ. ಹಾಗೆಯೇ ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ 25 ರೂ.ಗಳನ್ನು ಕೊಡುತ್ತಾರೆ. ಆದರೆ ಇಂದು 500 ರಿಂದ 700 ರವರಗೆ ಹೆಚ್ಚಾಗಿರುವುದು ಕಂಡುಬಂದಿದೆ. ಕಣಿಯನ್‌ರಲ್ಲಿ ವರದಕ್ಷಿಣೆ ಪದ್ದತಿಯು ಅಷ್ಟಾಗಿ ಕಂಡುಬಂದಿರುವುದಿಲ್ಲ. ಆದರೆ ಬೇರೆ ಸಮುದಾಯಗಳ ಪ್ರಭಾವದಿಂದ ಕಣಿಯರಲ್ಲಿ ಇತ್ತೀಚೆಗೆ ಕಂಡುಬರುತ್ತಿದೆ.

**ಜನಿವಾರ ಹಾಕುವ ಕಾರ್ಯ:**

ಕಣಿಯರಲ್ಲಿ ಮದುವೆಗೆ ಮೊದಲು ಜನಿವಾರ ಧರಿಸುವ ಪದ್ಧತಿಯಿದೆ. ಮದುವೆ ಸಂದರ್ಭದಲ್ಲಿ ಮಾತ್ರ ಜನಿವಾರ ಹಾಕಲಾಗುತ್ತದೆ. ಇವರು ಧಾರ್ಮಿಕ ಸಂಪ್ರದಾಯವನ್ನು ಬಹಳ ಅಚ್ಚುಕಟ್ಟಾಗಿ ಭಕ್ತಿಯಿಂದ ಮಾಡುತ್ತಾರೆ. ಗಂಡಿಗೆ ಜನಿವಾರ ಹಾಕುವ ಪದ್ಧತಿಯು ಬಹಳ ಹಿಂದಿನಿಂದಲೂ ಬಂದ ಸಂಪ್ರದಾಯ. ಇಂದಿನ ದಿನಗಳಲ್ಲಿ ಕಣಿಯರನ್ನು ಜನಿವಾರ ಹಾಕುವ ಪದ್ಧತಿಯು ಮಹತ್ವ ಕಳೆದುಕೊಳ್ಳುತ್ತಿದೆ.

**ಕಂಕಣ ಧಾರೆ ಮಾಡುವುದು:**

ಯಜಮಾನರ ಮತ್ತು ಬಂಧು ಬಳಗದ ಎದಿರು ಗಂಡಿಗೆ ಕಂಕಣ ಧಾರೆಯನ್ನು ಮಾಡುತ್ತಾರೆ. ಅಕ್ಕಿ ಮತ್ತು ತೆಂಗಿನ ಕಾಯಿಯನ್ನು ಒಂದು ಬಿಳಿಬಟ್ಟೆಯಲ್ಲಿ ಕಟ್ಟಿ ಗಂಡಿನ ಎಡದ ಹೆಗಲಿಗೆ ನೇತು ಹಾಕುತ್ತಾರೆ ಹಾಗೂ ಕೈಗೆ ಒಂದು ಬೀಸಣಿಗೆಯನ್ನು ಕೊಟ್ಟು ಆ ಗಂಡನ್ನು ಕಾಶಿಯಾತ್ರೆಗೆಂದು ಒಂದು ಅಶ್ವತ ಮರದ ಕಟ್ಟೆಯ ಮೇಲೆಕೂರಿಸುತ್ತಾರೆ.

**ಕಾಶಿಯಾತ್ರೆ ಪದ್ಧತಿ:**

ಕಣಿಯ ಸಮುದಾಯದಲ್ಲಿ ಹೆಣ್ಣಿನವರು ತಾಯಿ ತಂದೆ ಗಂಡಿನ ಹತ್ತಿರ ಹೋಗಿ ನೀವು ಎಲ್ಲಿಗೆ ಹೋಗುವಿರಿದ್ದಿರಿ ಎಂದು ಪ್ರಶ್ನೆಯನ್ನು ಮಾಡುತ್ತಾರೆ. ಆಗ ಆ ಸಮಯದಲ್ಲಿ ಆ ಹುಡುಗನು ನಾನು ಕಾಶಿ ಯಾತ್ರೆಗೆ ಹೊಗುತ್ತಿದ್ದೇನೆಂದು ಎಂದು ಉತ್ತರ ನೀಡುತ್ತಾನೆ ಇದಕ್ಕೆ ಪ್ರತ್ಯತ್ತರವಾಗಿ ಹುಡುಗಿ ತಂದೆ–ತಾಯಿಯರು ನೀವು ಕಾಶಿಯಾತ್ರಗೆ ಹೋಗುವುದು ಬೇಡ ಎಂದು ಹೇಳುತ್ತಾರೆ ಹಾಗೂ ನಿಮ್ಮ ಹೆಸರೇನು, ಕುಲ ಯಾವುದು ಎಂದು ಪ್ರಶ್ನಿಸುತ್ತಾರೆ. ಈ ಎಲ್ಲಾ ಪ್ರಶ್ನೆಗಳಿಗೂ ಗಂಡು ಉತ್ತರವನ್ನು ನೀಡುತ್ತಾನೆ. ನಂತರ ತಾವುಗಳು ತಮ್ಮ ಕನ್ಯೆಯನ್ನು ಆ ಹುಡುಗನಿಗೆ ಧಾರೆ ಎರೆದುಕೊಡುವುದಾಗಿ ತಿಳಿಸುತ್ತಾರೆ. ಇದಾದ ಮೇಲೆ ಹೆಣ್ಣಿನ ತಂದೆ–ತಾಯಿ ಗಂಡಿನ ಪಾದ ಪೂಜೆ ಮಾಡುತ್ತಾರೆ. ನಂತರ ಹೆಣ್ಣಿನ ತಂದೆ ಪಾದ ಪೂಜೆ ಮಾಡಿದ ನೀರನ್ನು ಕುಡಿಯುತ್ತಾರೆ. ಇವೆಲ್ಲವೂ ನಡೆದ ತಕ್ಷಣ ಗಂಡಿಗೆ ಛತ್ರಿ, ಚಪ್ಪಲಿ  ಬಟ್ಟೆ, ವಾಚು, ಉಂಗುರ ಮುಂತಾದವುಗಳನ್ನು ನೀಡುತ್ತಾರೆ. ಇದನ್ನು ಹೆಣ್ಣಿನ ತಮ್ಮ ಅಥವಾ ಅಣ್ಣ ನೀಡುತ್ತಾರೆ.

**ಧಾರ ಮೂಹುರ್ತ:**

ಗಂಡು ಹಸಮಣೆಯ ಮೇಲೆ ನಿಲ್ಲುತ್ತಾನೆ. ಆತನ ಮುಖ ಕಾಣದ ಹಾಗೆ ತೆರೆಯ ಬಟ್ಟೆಯನ್ನು ಹಿಡಿದು ಕೊಂಡಿರುತ್ತಾರೆ. ನಂತರ ಹೆಣ್ಣನ್ನು ಕರೆ ತಂದು ಗಂಡಿನ ಎದುರಿಗೆ ಇರುವ ಹಸಮಣೆಯ ಮೇಲೆ ನಿಲ್ಲಿಸುತ್ತಾರೆ. ಪೂಜಾರಿ ತುಳಸಿ ಮಾಲೆಯನ್ನು ಇಬ್ಬರ ಕೈಯಲ್ಲಿ ಒಂದೊಂದನ್ನು ನೀಡುತ್ತಾರೆ. ನಂತರ ಗಂಡು ಹೆಣ್ಣಿನ ಕುತ್ತಿಗೆಗೆ ಆ ಮಾಲೆಯನ್ನು ಹಾಕುತ್ತಾನೆ. ಹೆಣ್ಣು ಸಹ ಹಾರವನ್ನು ಗಂಡಿನ ಕುತ್ತಿಗೆಗೆ ಹಾಕುತ್ತಾಳೆ. ಇದೇ ರೀತಿ ಐದು ಬಾರಿ ತುಳಸಿಯನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುತ್ತಾರೆ. ವರನು ವಧುವಿಗೆ ತಾಳಿ ಕಟ್ಟುವ ಮೂಲಕ ವಿವಾಹ ಪೂರ್ಣಗೊಳ್ಳುತ್ತದೆ. ನಂತರ ತರೆಯನ್ನು ತೆಗೆದು ಹುಡುಗನು ಪೂರ್ವಾಭಿಮುಖವಾಗಿ, ಹುಡುಗಿಯನ್ನು ಪಶ್ಚಿಮಾಭಿಮುಖವಾಗಿ ನಿಲಿಸುತ್ತಾರೆ (ಚಪ್ಪರದ ಅಡಿಯಲ್ಲಿ) ಗಂಡಿನ ಎರಡು ಹಸ್ತಗಳ ಮೇಲೆ ಹೆಣ್ಣಿನ ಎರಡು ಹಸ್ತಗಳನ್ನು ಇಡುತ್ತಾರೆ. ಹೆಣ್ಣಿನ ಕೈಯಲ್ಲಿ ಎರಡು ಬಾಳೆಹಣ್ಣನ್ನು, ಐದು ವಿಳ್ಯದೆಲೆಯನ್ನು, ಐದು ಅಡಿಕೆಯನ್ನು ಮತ್ತು ಗಂಡಿನ ಕೈಯಲ್ಲಿ ಐದು ಎಲೆ, ಐದು ಅಡಿಕೆ, ಒಂದು ತೆಂಗಿನ ಕಾಯಿಯನ್ನು ಕೊಡುತ್ತಾರೆ. ಇವರಿಬ್ಬರ (ಗಂಡು–ಹೆಣ್ಣು) ಕೈಗಳ ಮೇಲೆ ಹೆಣ್ಣಿನ ತಂದೆ–ತಾಯಿ, ಗಂಡಿನ ತಂದೆ–ತಾಯಿ ಹಾಗೂ ಬಂಧು–ಬಳಗದವರು ಎಲ್ಲರು ಸೇರಿ ಒಂದು ಪಾತ್ರೆಯಲ್ಲಿ ಹಾಲನ್ನು ಬಿಡುತ್ತಾರೆ. ಹೀಗೆ ಐದು ಬಾರಿ ಮಾಡುತ್ತಾರೆ. ಹೀಗೆ ಮಾಡುವಾಗ ಒಂದು ಕಾಸನ್ನು (ಹಣ) ಸಹ ಹಾಲಿನ ಜೊತೆಯಲ್ಲಿ ಬಿಡುತ್ತಾರೆ (ಗಂಡು–ಹೆಣ್ಣಿನ ಕೈಗಳ ಮೇಲೆ) ಈ ಕಾರ್ಯಕ್ಕೆ ಧಾರೆ ಎಂದು ಹೇಳುತ್ತಾರೆ.

**ಮುಯ್ಯಿ, ಬೀದಿ ಮೆರವಣಿಗೆ ಮತ್ತು ಕಂಕಣ ಬಿಚ್ಚುವುದು**

ಧಾರೆಯಾದ ಒಂದೆರಡು ಗಂಟೆಗಳ ನಂತರ ವಧು–ವರರನ್ನು ಸಿಂಗರಿಸಿ ಮುಯ್ಯಿಗೆ (Reception) ಕೂರಿಸುತ್ತಾರೆ. ಬಂದಿರುವಂತಹ ಜನರು ಉಡುಗೊರೆಯನ್ನು ಕೊಟ್ಟು ವಧು–ವರರಿಗೆ ಹಾರೈಸುತ್ತಾರೆ. ಮುಯ್ಯಿ ಮಾಡಿದವರಿಗೆ ಎಲೆ ಅಡಿಕೆ ಕೊಡುವುದು ಸಂಪ್ರದಾಯ. ಮದುವೆಯಾದ ನಂತರ ಕೊನೆಯಲ್ಲಿ ಬೀದಿಯ ಸುತ್ತ ವಧು–ವರರನ್ನು ಮೆರವಣಿಗೆ ಮಾಡುತ್ತಾರೆ. ಡೋಲಿನ ಸದ್ದಿಗೆ ಹುಡುಗರು, ಚಿಕ್ಕ ಮಕ್ಕಳು ಕುಣಿದು ಕುಪ್ಪಳಿಸುತ್ತಾರೆ. ವಧುವರರು ಮೆರವಣಿಗೆಗೆ ಹೊರಡುವಾದಗಿನಿಂದ ಮುಗಿಯುವವರೆಗೂ ಅವರಿಗೆ ಮುಖದಿಂದ ವೀಳ್ಯದೆಲೆಯನ್ನು ದೃಷ್ಟಿ ತೆಗೆದು ಇಡುತ್ತಾರೆ. ಮೆರವಣಿಗೆ ಮುಗಿಯುವ ಹಂತದಲ್ಲಿ ಊರಿನಲ್ಲಿರುವ ದೇವಸ್ಥಾನಕ್ಕೆ ಹೋಗಿ ಕೈ ಮುಗಿದು ನಂತರ ಚಾವಡಿಯಲ್ಲಿ ಕೂರಿಸಿ ಚಂಡಾಟ ಆಡಿಸುತ್ತಾರೆ. ನಂತರ ಹಿರಿಯರು ವಧುವರರ ಕಂಕಣವನ್ನು ಬಿಚ್ಚಿಸುತ್ತಾರೆ. ಹೆಣ್ಣು ಗಂಡಿನ ಮನೆಗೆ ಬಂದು ದೇವರ ದೀಪವನ್ನು ಹಚ್ಚುತ್ತಾಳೆ.

**ಬೀಗರ ಔತಣ**

ಮದುವೆಯಾದ ಒಂದೆರಡು ದಿನಗಳ ನಂತರ ವಧು ವರರ ಮನೆಯವರು ಬೀಗರ ಊಟ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಾರೆ. ಬೀಗರೂಟವು ಮುಖ್ಯವಾಗಿ ಬೀಗಬೀಗರಿಗೆ ಸಂಬಂಧಿಸಿದ್ದು. ಸಿಹಿಊಟ ಅಥವಾ ಮಾಂಸದೂಟವನ್ನು ಮಾಡಲಾಗುತ್ತದೆ. ಬೀಗರು ಇಲ್ಲಿ ಪರಸ್ಪರ ಬೆರೆತು ಮಾತನಾಡುತ್ತಾರೆ, ಆತ್ಮೀಯರಾಗುತ್ತಾರೆ. ಅವರದೇ ಆದ ವಿನೋದ ಕಾರ್ಯದಲ್ಲಿ ತೊಡಗುತ್ತಾರೆ.

**ಮುಹೂರ್ತ ಕೀಳುವುದು ಮತ್ತು ಅಳಿಗೊಳಿ ಶಾಸ್ತ್ರ**

ಮದುವೆಗೆಂದು ಹಾಕಿದ ಮುಹೂರ್ತವನ್ನು ಮದುವೆಯಾದ 5 ದಿನದ ನಂತರ ಕೀಳಲಾಗುತ್ತದೆ. ಕೀಳುವಾಗ ಮುಖ್ಯವಾಗಿ ಮನೆ ದೇವರ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿ ಪೂಜಾರಿಯಿಂದ ತೀರ್ಥವನ್ನು ತೆಗೆದುಕೊಂಡು ಬಂದು ಚಪ್ಪರಕ್ಕೆಲ್ಲಾ ತೀರ್ಥವನ್ನು ಚಿಮುಕಿಸಿ ಮುಹೂರ್ತಕ್ಕೆ ಪೂಜೆ ಮಾಡಿ ಹಿರಿಯರ ಮಾರ್ಗದರ್ಶನದಂತೆ ಮುಹೂರ್ತವನ್ನು ಕೀಳಲಾಗುತ್ತದೆ. ನಂತರ ಚಪ್ಪರವನ್ನೆಲ್ಲಾ ಕಿತ್ತು ಮದುವೆ ಮನೆ ಮಾಮೂಲಿನಂತೆ ಕಾಣುತ್ತದೆ.

ಮದುವೆಯಾದ ಕೆಲವು ದಿನಗಳಲ್ಲಿ ಅಳಿಯನನ್ನು ಹೆಣ್ಣಿನ ಮನೆಯವರು ವಿಶೇಷವಾಗಿ ಸತ್ಕರಿಸುವ ಸಲುವಾಗಿ ಶಾಸ್ತ್ರದ ಪ್ರಕಾರ 9 ದಿನ ಅಳಿಗುಳಿ ಮಾಡಲಾಗುತ್ತದೆ. ಈ ಸಮಯದಲ್ಲಿ ಅಳಿಯನಿಗೆ ವಿಶೇಷವಾದ ಭಕ್ಷ್ಯ ಭೋಜನ ಇರುತ್ತದೆ. ಅನೇಕ ಶಾಸ್ತ್ರಗಳೊಂದಿಗೆ ಪ್ರಸ್ತದ ಶಾಸ್ತ್ರವನ್ನು ಮಾಡಲಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಕೃಷ್ಣ ಅಯ್ಯಂಗಾರ್. ಡಿ., (1956), ಕನ್ನಡನಾಡಿನ ಆದಿವಾಸಿಗಳು, ವಾರ್ತ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು.
2. ನಾಗರಾಜೇ ಅರಸು, ಜಿ.ವಿ., (1977), ಕಣಿಯರು, ಮೈಸೂರು ವಿ.ವಿ., ಮೈಸೂರು.(ಅಪ್ರಕಟಿತ ಪ್ರಬಂಧ)
3. ಸಿದ್ಧಲಿಂಗಯ್ಯ, (1999)., 'ಕಣಿಯನ್ ಬಗ್ಗೆ ಕುರಿತು ಒಂದು ಚರ್ಚೆ', ಜನವಾಹಿನಿ, ಬೆಂಗಳೂರು.
4. Anantha Krishnan Iyer L.A.K., (1981), The Tribes and Castes of Cochin, Cosmo Publications, New Delhi.
5. Buchanan. F., (1807), A. Journey from Madras through the countries of Mysore, Canara and Malabar. Oxford University Press, New Delhi
6. Census of India (2011), Govt of India, New Delhi.
7. Census of India (2011), Mysore District Census Handbook.
8. Census of India (2011), Chamarajamagara District Census Handbook.
9. Gangadhar, M. R. and Ronibala Devi., (2006). *ABO and Rh (D) blood groups among the Kaniyas of Karnataka.Anthropologist.* 8(2): 145-146.
10. Gupta. R., (2003), Kaniyar, People of India, Ed. K.S. Singh. Scheduled Tribes, Oxford University Press, New Delhi
11. Thuston, E., (1909), Caste and Tribes of Southern India, Madras Govt. Press, Madras.
12. Vidyarthi, L.P. and Roy B.K., (1976), Tribal Culture of India, Concept Publishing house, New Delhi.